

“ನೀನೊಬ್ಬ...” ಎನ್ನುತ್ತಾ ಕೂತಲ್ಲಿಂದ ಎದ್ದ ನಾಗರಾಜ. ತಲೆ ತಿರುಗಿ ಜೋಲಿ ಹೊಡೆಯುವಂತಾಯ್ತು. ಮಧ್ಯಾಹ್ನ ಕೂಡಾ ಉಂಡಿದ್ದು ಅಷ್ಟರಲ್ಲೇ ಇತ್ತು. ಬಾಳೆಲೆ ಮುಂದೆ ಕೂತು ಉಂಡ ಶಾಸ್ತ್ರ ಮಾಡಿದ್ದು. ತಡೆಯಬೇಕಲ್ಲ ದೇಹ?

★★★

ಸಾಲಿಗೆ ಹಾಕಿದ್ದ ಮೂರು ಬಳ್ಳಿಗಳ ಎದುರು ಕುಗುರುವಂತೆ ಉರಿಯುತ್ತಿದ್ದ ಚಿಮಣಿ ಬುಡ್ಡಿ. ಪ್ರತ್ಯೇಕ ಊಟದ ಒಳಗು ಅನ್ನುವುದಿಲ್ಲದೆ ಅಡುಗೆಮನೆಯೇ ಊಟದ ಮನೆ. ಮಕ್ಕಳಿಬ್ಬರು ತಮ್ಮ ಜಾಗ ಹಿಡಿದು ಕೂತಿದ್ದುವು. ಕೂತಲ್ಲೇ ಸಣ್ಣಕ್ಕೆ ಏನೋ ಕೀಟಲೆ ತೆಗೆದಿದ್ದುವು. ದೊಡ್ಡವನಿಗೆ